# ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ.

## ಸಿ.ಸಿ ನಂ. : 591/2022

ಪಿರ್ಯಾದುದಾರ :- ಚನ್ನರಾಯಪಟ್ಟಣ ಗ್ರಾಮಾಂತರ ಪೋಲಿಸರು

**ವಿರುದ್ಧ**

ಆರೋಪಿ :- ಕಾಳೇಗೌಡ ಬಿನ್ ಅಮಾಸೇಗೌಡ,
ಸುಮಾರು 68 ವರ್ಷ ವಯಸ್ಸು,
ಸಣ್ಣೇನಹಳ್ಳಿ ಗ್ರಾಮ, ದಂಡಿಗನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

## -:: ದೋಷಾರೋಪಣೆ ::-

ಶ್ರೀಮತಿ ರಶ್ಮಿ ಎಸ್., ಎಂ.ಎ., ಎಲ್.ಎಲ್.ಬಿ., ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಗೆ ಈ ಮೂಲಕ ಗುರಿಪಡಿಸುತ್ತೇನೆ.

ದಿಃ 21.03.2022 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ದಂಡಿಗನಹಳ್ಳಿ ಹೋಬಳಿ, ಸಣ್ಣೇನಹಳ್ಳಿ ಗ್ರಾಮದ ಚಾಸಾ-1 ರವರ ತೋಟದ ಪಕ್ಕದಲ್ಲಿ ಹಾದುಹೋಗಿರುವ ಸಣ್ಣೇನಹಳ್ಳಿ-ಶೆಟ್ಟಿಗೌಡನಹಳ್ಳಿ ರಸ್ತೆಯಲ್ಲಿ ಆರೋಪಿಯಾದ ನೀಮ್ಮ ತಂದೆ ಅಂದರೆ ಚಾಸಾ-1 ರವರ ಮಾವನವರಿಂದ ಆರೋಪಿಯಾದ ನಿಮ್ಮ ಮಗ ನಾಗರಾಜನ ಹೆಸರಿಗೆ 2.00 ಎಕರೆ ಜಮೀನನ್ನು ದಾನ ಪತ್ರ ಮಾಡಿಸಿಕೊಂಡು ಬರೆಯಿಸಿಕೊಂಡಿದ್ದ ಜಮೀನನ್ನು ಚಾಸಾ-1 ರವರ ಕುಟುಂಬದವರು ಸದರಿ ಜಮೀನಿನ ಮೇಲೆ ಕೋರ್ಟ್ ಕೇಸ್ ಹಾಕಿ, ದಾನಪತ್ರವನ್ನು ರದ್ದು ಗೊಳಿಸಿದ ವಿಚಾರದಲ್ಲಿ ಆರೋಪಿಯಾದ ನೀವು ಚಾಸಾ-1 ರವರೊಂದಿಗೆ ದ್ವೇಷವಿಟ್ಟುಕೊಂಡು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ

ಮತ್ತು ನೆಮ್ಮದಿಗೆ ಭಂಗವನ್ನುಂಟು ಮಾಡುವುದಕ್ಕಾಗಿ ಉದ್ದೇಶಪೂರ್ವಕವಾಗಿ ಉದ್ರೇಖಿಸಿದ್ದೀರಿ. ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ, ಈ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರವರ ಜೊತೆ ಜಗಳ ತೆಗೆದು ಒಂದು ದೊಣ್ಣೆಯಿಂದ ಚಾಸಾ–1 ರವರ ಎರಡು ಕಾಲು, ಹಿಮ್ಮಡಿ ಹತ್ತಿರ, ಎರಡು ಮಂಡಿಯ ಹತ್ತಿರ, ತಲೆಯ ಮೇಲ್ಭಾಗಕ್ಕೆ ಕುತ್ತಿಗೆಯ ಹಿಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತೀರಿ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ, ಈ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರವರ ಜೊತೆ ಜಗಳ ತೆಗೆದು ಕೈಗಳಿಂದ ಚಾಸಾ–1 ರವರ ತಲೆಗೆ, ಬಲಕಿವಿ ಹತ್ತಿರ ಹೊಡೆದು, ನಂತರ ಚಾಸಾ–1 ರವರನ್ನು ನೆಲಕ್ಕೆ ಬಿಳಿಸಿಕೊಂಡು, ಕಾಲನಿಂದ ಹೊಟ್ಟೆಗೆ, ಬೆನ್ನಿಗೆ ಒದ್ದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತೀರಿ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ

ನಾಲ್ಕನೇಯದಾಗಿ, ಈ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರವರ ಜೊತೆ ಜಗಳ ತೆಗೆದು ಚಾಸಾ–1 ರವರು ಧರಿಸಿದ್ದ ಬಟ್ಟೆ ಹಿಡಿದು ಎಳೆದಾಡಿ ಹೆಂಗಸಿನ ಮಾನಭಂಗ ಮಾಡುವ ಉದ್ದೇಶದಿಂದ ಅವಳ ಮೇಲೆ ಹಲ್ಲೆ ಮತ್ತು ಅಪರಾಧಿಕ ಬಲಪ್ರಯೋಗ ಮಾಡಿರುತ್ತೀರಿ. ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 354 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಐದನೇಯದಾಗಿ, ಈ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರವರ ಜೊತೆ ಜಗಳ ತೆಗೆದು ಚಾಸಾ–1 ರವರಿಗೆ ಈ ದಿನ ಬದುಕಿಕೊಂಡಿದ್ದೀಯಾ, ಒಂದು ಗತಿ ಕಾಣಿಸುತ್ತೇನೆಂದು ಕೊಲೆ ಮಾಡುವುದಾಗಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿರುತ್ತೀರಾ. ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

**ಪ್ರಶ್ನೆ**1 : ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?
ಉಃ

**ಪ್ರಶ್ನೆ** 2 : ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?
ಉಃ

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 13 ನೇ ದಿವಸ, ಅಕ್ಟೋಬರ್ ಮಾಹೆ, 2022.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.